25 ಏಪ್ರಿಲ್ 2025

ಪ್ರಿಯ ಗ್ರಾಹಕ ಬಾಂಧವರೆ ,

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಈ ಭಾಗದ ಜೀವನಾಡಿಯಾಗಿದೆ ಎಂದರೆ ತಪ್ಪೆನಿಸದು. 1976 ರಲ್ಲಿ ಪ್ರಾರಂಭವಾದ ಈ ಬ್ಯಾಂಕು ಹಲವು ಬದಲಾವಣೆಗೊಳಪಟ್ಟು ನಿಮ್ಮೆಲ್ಲರ ಲಾಲನೆ ಪಾಲನೆಯಲ್ಲಿ ಇಂದು 9 ಜಿಲ್ಲೆಗಳ ಕಾರ್ಯಕ್ಷೇತ್ರದಲ್ಲಿ 629 ಶಾಖೆಗಳನ್ನು ಹೊಂದಿದೆಯಲ್ಲದೆ ಸರಿಸುಮಾರು 77ಲಕ್ಷ ಗ್ರಾಹಕರಿಗೆ ಉಪಯುಕ್ತ ಬ್ಯಾಂಕಿಂಗ್ ಸೇವೆ ನೀಡುತ್ತಲಿದೆ. ಬ್ಯಾಂಕಿನ ವಹಿವಾಟು ಇದೀಗ 38,500 ಕೋಟಿ ರೂ. ದಾಟಿದ್ದು ಈ ಭಾಗದ ಪ್ರಾದೇಶಿಕ ಅಭಿವೃದ್ಧಿಯಲ್ಲಿ ಬ್ಯಾಂಕು ಮಹತ್ತರ ಪಾತ್ರವಹಿಸುತ್ತಲಿದೆ.

ಇದೀಗ ಕೇಂದ್ರ ಸರ್ಕಾರದ ಅಧಿಸೂಚನೆಯ ಅನ್ವಯ ರಾಜ್ಯದ ಎರೆಡು ಗ್ರಾಮೀಣ ಬ್ಯಾಂಕುಗಳು ಅಂದರೆ ನಿಮ್ಮ ನೆಚ್ಚಿನ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಮತ್ತು ಬಳ್ಳಾರಿ ಪ್ರಧಾನ ಕಚೇರಿಯನ್ನು ಹೊಂದಿರುವ ಕರ್ನಾಟಕ ಗ್ರಾಮೀಣ ಬ್ಯಾಂಕು ಪರಸ್ಪರ ವಿಲೀನಗೊಂಡು "ಕರ್ನಾಟಕ ಗ್ರಾಮೀಣ ಬ್ಯಾಂಕ್" ಎಂಬ ಹೆಸರಿನಲ್ಲಿ ಮೇ 1 ರಿಂದ ಹೊಸ ಬ್ಯಾಂಕು ಉದಯವಾಗಲಿದೆ . ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕು 1751 ಶಾಖೆಗಳೊಂದಿಗೆ ರೂ.1,04,851 ಕೋಟಿ ವಹಿವಾಟು ನಡೆಸುವ ಬೃಹತ್ ಗ್ರಾಮೀಣ ಬ್ಯಾಂಕಾಗಿ ಹೊರಹೊಮ್ಮಲಿದೆ.

ಪ್ರಾದೇಶಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸಿದ್ದ ಈ ಮೊದಲಿದ್ದ ಈ ಎರೆಡೂ ಗ್ರಾಮೀಣ ಬ್ಯಾಂಕುಗಳು ಜನಸಾಮಾನ್ಯರ ಅದರಲ್ಲೂ ರೈತರ ಬೆನ್ನೆಲುಬಾಗಿ, ಬಡ–ಕಡುಬಡವರ ಜೀವನಾಡಿಯಾಗಿ, ಕುಶಲ ಕರ್ಮಿಗಳ ಆಶಾಕಿರಣವಾಗಿ ಕಾರ್ಯ ನಿರ್ವಹಿಸಿವೆ. ಇದೀಗ ವಿಲೀನಗೊಂಡು  ಹೊರಹೊಮ್ಮಲಿರುವ ನೂತನ ಬ್ಯಾಂಕು ಕೂಡ ಅದೇ ಸಂಪ್ರದಾಯದಲ್ಲಿ ಇನ್ನೂ ಹೆಚ್ಚಿನ ಭದ್ರತೆ ಮತ್ತು ವಿಶ್ವಾಸದಿಂದ ಮುನ್ನಡೆಯಲಿದೆ. ಉದಯಗೊಳ್ಳಲಿರುವ ಈ ನೂತನ ಬ್ಯಾಂಕಿನ ಪ್ರಧಾನ ಕಚೇರಿ ಬಳ್ಳಾರಿಯಲ್ಲಿ ಇರಲಿದೆ. ಹಾಗೆಯೇ ಈ ನೂತನ ಬ್ಯಾಂಕಿನಲ್ಲಿ ಕೇಂದ್ರ ಸರ್ಕಾರ (50%) ರಾಜ್ಯ ಸರ್ಕಾರ (15%) ಮತ್ತು ಕೆನರಾ ಬ್ಯಾಂಕಿನ (35%) ಪಾಲುದಾರಿಕೆ ಮುಂದುವರೆಯಲಿದೆ.

ಪ್ರಾದೇಶಿಕ ಅಭಿವೃದ್ಧಿಯಲ್ಲಿನ ತನ್ನ ಉದ್ದೇಶದಿಂದ ಸ್ವಲ್ಪವೂ ವಿಚಲಿತಗೊಳ್ಳದೆ ಹಾಗೆಯೇ ಸಮ್ಮಿಳಿತ ವಿಚಾರಧಾರೆಯೊಂದಿಗೆ ಸರ್ಕಾರಿ ಸ್ವಾಮಿತ್ವದ ತಳಹದಿಯಲ್ಲಿ ಮುನ್ನಡೆಯಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕು ತಮ್ಮಿಂದ ಇನ್ನೂ ಹೆಚ್ಚಿನ ಸಹಕಾರವನ್ನು ಕೋರುತ್ತದೆ. ವಿಲೀನದ ಸಮಯದಲ್ಲಿ ಕೆಲ ಬದಲಾವಣೆಗಳು ಬರಬಹುದಾದರೂ ಅದು ಗ್ರಾಹಕ ಸ್ನೇಹಿಯಾಗಿರಲಿದೆ . ನಂತರದಲ್ಲಿಸರ್ಕಾರಿ ಸ್ವಾಮಿತ್ವದಲ್ಲೇ ಮುನ್ನಡೆಯಲಿರುವ ಈ ಬೃಹತ್ ಬ್ಯಾಂಕಿನ ಉತ್ಕೃಷ್ಟ ಸೇವೆಯನ್ನು ಆನಂದಿಸಲಿರುವಿರಿ. ನಿಮ್ಮೆಲ್ಲರ ಅವಿರತ ಬೆಂಬಲ ಪ್ರೀತಿ ವಿಶ್ವಾಸ ಇದೇ ರೀತಿಯಲ್ಲಿ ಮುಂದುವರೆಯಲಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಶ್ರೀಕಾಂತ ಎಮ್. ಭಂಡಿವಾಡ)
ಅಧ್ಯಕ್ಷರು